


ಪರಿಗಣಿಸಲಾಗುವ ಮಾಂಟ್ ಬ್ಲಾಂಕ್, ಸಮುದ್ರ ಮಟ್ಟದಿಂದ 15,771 ಅಡಿ ಎತ್ತರದಲ್ಲಿದ್ದು, ಉತ್ತರ ಆಲ್ಫ್ ಪರ್ವತ ಶ್ರೇಣಿಯಲ್ಲಿದೆ. ಫ್ರಾನ್ಸ್‌ನ ಮಾಂಟ್ ಬ್ಲಾಂಕ್‌ಗೆ ವಿಲಾರ್ಸ್‌ನಿಂದ ಸುಮಾರು ಒಂದು ಗಂಟೆಯ ಪ್ರಯಾಣ. ಅದೇ ರೀತಿ ಸ್ವಿಝರ್ಲ್ಯಾಂಡಿನ ಜನಪ್ರಿಯ ತಾಣಗಳಾದ ಉಂಘ್ರಾಫ್ ಮತ್ತು ಝರ್ಮಾಟ್‌ಗೆ ಇಲ್ಲಿಂದ ಎರಡೂವರೆ ಗಂಟೆಗಳ ಪ್ರಯಾಣ.

ವಿಲಾರ್ಸ್‌ಗೆ ಅಂತರಾಷ್ಟ್ರೀಯ ಸಂಸ್ಥೆಗಳ ತವರೂರಾದ ಜಿನೀವಾಗೆ ಒಂದೂವರೆ ಗಂಟೆಯ ದೂರವಾದರೆ, ರಾಜಧಾನಿ ಬರ್ನ್‌ಗೂ ಒಂದೂವರೆ ಗಂಟೆಯ ಪ್ರಯಾಣ. ಈ ಎರಡೂ ನಗರಗಳಲ್ಲಿ ಅನೇಕ ಪ್ರಸಿದ್ಧ ಸ್ಥಳಗಳಿವೆ. ಚಲನಚಿತ್ರಗಳ ಶೂಟಿಂಗ್‌ಗೆ ಪ್ರಶಸ್ತ ನಗರಗಳಾದ ಇಂಟರ್‌ಲಾಕೆನ್‌ಗೆ 2 ಗಂಟೆ ಮತ್ತು ಲೂಸರ್ನ್‌ಗೆ ಎರಡೂವರೆ ಗಂಟೆಗಳಲ್ಲಿ ಹೋಗಿ ಬರಬಹುದು.

## ಪರಿಸರ ಕಾಳಜಿ

ವಿಲಾರ್ಸ್ ಟೂರಿಸಮ್‌ನವರು ಅನುಷ್ಠಾನಗೊಳಿಸಿರುವ ಅನೇಕ ಯೋಜನೆಗಳು, ಕಾರ್ಯಗಳು ಪರಿಸರ ಸಂರಕ್ಷಣೆಗೆ ಪೂರಕವಾಗಿವೆ. ಮೂರು ಪರ್ವತ ಶ್ರೇಣಿಗಳ ಮಾರ್ಗಗಳಿಂದ ರಚಿಸಿರುವ ಟ್ರೆಶರ್ ಹಂಟ್ ಪ್ರವಾಸಿಗಳಿಗೊಂದು ಆಕರ್ಷಕ ಮತ್ತು ಕುತೂಹಲಭರಿತ ಚಟುವಟಿಕೆ. ಇಲ್ಲಿನ ಟೂರಿಸ್ಟ್ ಕಛೇರಿಯಲ್ಲಿ ಹೆಸರು ನೋಂದಾಯಿಸಿ, ಟ್ರೆಶರ್ ಹಂಟ್ ಮಾರ್ಗಗಳಲ್ಲಿ ಇರುವ ಅನೇಕ ಸೂಚನೆಗಳನ್ನು ಪಾಲಿಸಿ, ಪ್ರಶ್ನೆಗಳನ್ನು ಉತ್ತರಿಸಿದರೆ ಸಾಕು; ಪ್ರತಿ ವಾರ ಆಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶವಿದೆ.

ವಿಶೇಷವೆಂದರೆ, ಇಲ್ಲಿ ಸ್ಥಳೀಯ ಪ್ರಯಾಣ ಉಚಿತ! ಪ್ರವಾಸೋದ್ಯಮವನ್ನು ಇನ್ನಷ್ಟು ಉತ್ತೇಜಿಸಲು ಪ್ರವಾಸಿಗಳಿಗೆ ಉಚಿತ ಪಾಸ್ ನೀಡುತ್ತಾರೆ. ಜೊತೆಗೆ ಮಕ್ಕಳಿಗಾಗಿ ಡ್ರಾಯಿಂಗ್ ಸ್ಪರ್ಧೆಗಳು, ಛಾಯಾಚಿತ್ರ ಪ್ರದರ್ಶನಗಳನ್ನು ಏರ್ಪಡಿಸಿ, ಪರಿಸರ ಸಂರಕ್ಷಣೆಗೆ ಬಗ್ಗೆ ಸಕಾರಾತ್ಮಕ ಮನೋಭಾವ ಬೆಳೆಸುವಲ್ಲೂ ಯಶಸ್ವಿಯಾಗಿದ್ದಾರೆ.

## ವಿಲಾರ್ಸ್ ಚಾಕೋಲೇಟ್

ವಿಲಾರ್ಸ್ ಎಂಬ ಹೆಸರಿನಲ್ಲೇ ಪ್ರಖ್ಯಾತವಾದ 112 ವರ್ಷಗಳ ಇತಿಹಾಸವುಳ್ಳ ಚಾಕೊಲೇಟ್ ಕಂಪೆನಿ ಇಲ್ಲಿದೆ. ಆಲ್ಫ್ ಪರ್ವತ ಶ್ರೇಣಿಯೇ ಹೆಚ್ಚಾಗಿರುವ ಈ ದೇಶದಲ್ಲಿ ಸಾಗುವಳಿ ಮಾಡಬಹುದಾದ ಭೂಮಿ ಕೇವಲ ಶೇಕಡಾ 10 ಮಾತ್ರ. ಆದರೆ ಹೈನುಗಾರಿಕೆ ಅತ್ಯಂತ ಜನಪ್ರಿಯ. ಉದಾಹರಣೆಗೆ, ಕರ್ನಾಟಕದ ಕಾಲು ಭಾಗದಷ್ಟಿರುವ ಸ್ವಿಝರ್ಲ್ಯಾಂಡ್‌ನ 32 ಸಾವಿರ ಹೈನುಗಾರಿಕೆ ಕೇಂದ್ರಗಳಲ್ಲಿ 6 ಲಕ್ಷಕ್ಕೂ ಹೆಚ್ಚು ಹಸುಗಳಿದ್ದು, ವರ್ಷಕ್ಕೆ ಸುಮಾರು 4 ದಶಲಕ್ಷ ಟನ್ ಹಾಲು ಉತ್ಪಾದನೆಯಾಗುತ್ತದೆ. ಜಗತ್ತಿನಾದ್ಯಂತ ಉತ್ಕೃಷ್ಟತೆಗೆ ಹೆಸರಾದ ಸ್ವಿಸ್ ಚಾಕೊಲೇಟ್‌ನ ಬೆನ್ನೆಲುಬೇ ಇಲ್ಲಿನ ಡೈರಿ ಉದ್ಯಮ. ಕೌಟುಂಬಿಕ ವೃತ್ತಿಯಾದ ಇಲ್ಲಿನ ಹೈನುಗಾರಿಕೆ ಫಾರ್ಮ್‌ಗಳಲ್ಲಿ ಹಸುಗಳ ಹಿಂಡುವ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಪ್ರತಿ ಹಂತದಲ್ಲೂ ಬಳಸುತ್ತಾರೆ. ಉದಾಹರಣೆಗೆ, 50ಕ್ಕೂ ಹೆಚ್ಚು ಹಸುಗಳಿರುವ ಫಾರ್ಮ್‌ಗಳಲ್ಲಿ ಹಾಲು ಕರೆಯಲು ಸ್ವಯಂಚಾಲಿತ ರೊಬೋಟಿಕ್ ಯಂತ್ರಗಳನ್ನು ಬಳಸುತ್ತಾರೆ.

## ಹಸುಗಳೇ ಹೀರೊ!

ಇಲ್ಲಿ ಅತ್ಯಂತ ಜನಪ್ರಿಯ ಹಸು ತಳಿಯೆಂದರೆ ಕಂದು ಬಣ್ಣದ ಸ್ವಿಸ್. ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಮೇಲ್ಮಟ್ಟದ ಪರ್ವತಗಳಲ್ಲಿ ಮೇಯುವ ಹಸುಗಳನ್ನು ಚಳಿಗಾಲದ ಮುಂಚೆ ಬೆಚ್ಚಗಿನ ಕೆಳಮಟ್ಟದ ಪ್ರದೇಶಕ್ಕೆ ಕರೆತರಲಾಗುತ್ತದೆ. ಪ್ರತಿ ವರ್ಷದ ಆಗಸ್ಟ್ 1ರಂದು, ದೇಶದ ಇನ್ನಿತರ ಕಡೆಗಳಂತೆ, ವಿಲಾರ್ಸ್‌ನ ಜನರೆಲ್ಲರೂ ಸೇರಿ ರಾಷ್ಟ್ರೀಯ ದಿನ ಆಚರಿಸುತ್ತಾರೆ. ಸ್ವಿಝರ್ಲ್ಯಾಂಡಿನ ಅಪೂರ್ವ ಆಲ್ಫನ್ ವಾದ್ಯವನ್ನು ನುಡಿಸುತ್ತಾ ಪಟ್ಟಣದ ಉದ್ದಕ್ಕೂ ಸಾಗುವ ಈ ಸಂಭ್ರಮದ ಮೆರವಣಿಗೆಯಲ್ಲಿ, ಅಲಂಕೃತ ಹಸುಗಳು ಹೀರೋಗಳಂತೆ ಭಾಗಿಯಾಗುವುದು ಇಲ್ಲಿನ ವಿಶೇಷ. ಹೀಗಾಗಿಯೇ ಹಸು ಸ್ವಿಝರ್ಲ್ಯಾಂಡಿನ ಅನಧಿಕೃತ ರಾಷ್ಟ್ರೀಯ ಪ್ರಾಣಿಯೇ ಸರಿ.

ವಿಲಾರ್ಸ್ ಸೇರಿದಂತೆ ಸ್ವಿಝರ್ಲ್ಯಾಂಡಿಗೆ ವರ್ಷದ ಯಾವುದೇ ಸಮಯದಲ್ಲಿ ಹೋಗಬಹುದು. ಆದರೆ ಪರ್ವತ ಶ್ರೇಣಿಗಳಲ್ಲಿ ವರ್ಷವಿಡೀ ಅತಿಯಾದ ಚಳಿ ಇರುವುದರಿಂದ, ಸೂಕ್ತ ತಯಾರಿ ಇರಲೇಬೇಕು. ಆದರೆ ಈ ದೇಶದಲ್ಲಿ ಶಾಪಿಂಗ್ ಭಾರೀ ದುಬಾರಿ; ಇಲ್ಲಿನ ಸುಪ್ರಸಿದ್ಧ ಕೈಗಡಿಯಾರಗಳು ಮಾತ್ರ ದುಬೈನಲ್ಲಿ ಅಗ್ಗ! ಇಲ್ಲಿನ ಪ್ರವಾಸದಿಂದ ವಾಪಸ್ ಬರುವಾಗ ಚಾಕೊಲೇಟ್ ಮತ್ತು ಮಾದರಿ ಹಸು ಗಂಟೆಗಳನ್ನು ಮಾತ್ರ ತರುವುದು ವಾಡಿಕೆ.

ನಮ್ಮಲ್ಲಿ ಪ್ರಾಕೃತಿಕ ಸೌಂದರ್ಯದ ವೈವಿಧ್ಯತೆ ಮತ್ತು ವೈಶಿಷ್ಟ್ಯ ಅದ್ವಿತೀಯ. ಆದರೆ, ಪ್ರವಾಸೋದ್ಯಮದ ಹೆಸರಿನಲ್ಲಿ ಪರಿಸರ ನಾಶವಾಗುತ್ತಿರುವುದು ವಿಷಾದಕರ. ಉತ್ತರ ಭಾರತದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ, ಪರಿಸರದ ಕಾಳಜಿಯಿಲ್ಲದೆ ಜಾರಿಯಾಗಿರುವ ಅನೇಕ ಯೋಜನೆಗಳ ದುಷ್ಪರಿಣಾಮಗಳಿಂದ ಇತ್ತೀಚೆಗಷ್ಟೇ ಹಿಮಾಲಯ ಪರ್ವತಶ್ರೇಣಿಯಲ್ಲಿ ಅನಾಹುತಗಳೂ ನಡೆದವು. ಊಟಿ, ಸಿಮ್ಲಾಗಳಂತಹ ಸುಂದರ ಹಿಲ್ ಸ್ಟೇಷನ್‌ಗಳಲ್ಲೂ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ನಾವು ಮತ್ತು ನಮ್ಮ ಸರಕಾರ, ಯೂರೋಪಿನಿಂದ ಕಲಿಯುವುದು ಸಾಕಷ್ಟಿದೆ.